ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ
ಶ್ರೀರಂಗಪಟ್ಟಣ

ಸಿ.ಸಿ.1201/2022

| | |
|---|---|
| ಸಿ.ಡಬ್ಲ್ಯೂ ಃ | 1 |
| ಪಿ.ಡಬ್ಲ್ಯೂ ಃ | 1 |

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಶಿವಣ್ಣ |
| ತಂದೆ/ ಪತಿಯ ಹೆಸರು | ಃ | ಲೇಟ್ ಚಿಕ್ಕೇಗೌಡ |
| ವಯಸ್ಸು | ಃ | 50 ವರ್ಷ |
| ವೃತ್ತಿ | ಃ | ವ್ಯವಸಾಯ |
| ವಾಸ | ಃ | ಚಿಕ್ಕೇಗೌಡನ ಕೊಪ್ಪಲು |

**ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕಃ 24.02.2025**

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದ**

ನನಗೆ ಆರೋಪಿ ಗೊತ್ತಿರುತ್ತಾರೆ. ಸುಮಾರು 3 ವರ್ಷಗಳ ಹಿಂದೆ ನನ್ನ ಮಗನನ್ನು ಸಂಜು ಎಂಬುವವರು ಗಾರೆ ಕೆಲಸಕ್ಕೆ ಎಂದು ಮಂಡ್ಯಕ್ಕೆ ಕರೆದುಕೊಂಡು ಹೋಗಿರುತ್ತಾರೆ. ಆ ದಿನ ರಾತ್ರಿ 8.00 ರಿಂದ 8.30 ಗಂಟೆ ಸಮಯದಲ್ಲಿ ಸದರಿ ಸಂಜುರವರು ನನ್ನ ಮನೆಯ ಬಳಿ ಬಂದು ನನ್ನ ಮಗನಿಗೆ ಅಪಘಾತ ಆಗಿದ್ದು ಆತನು ಆಸ್ಪತ್ರೆಯಲ್ಲಿ ಇರುತ್ತಾನೆ ಎಂದು ಹೇಳಿರುತ್ತಾರೆ. ನಂತರ ನಾನು ಆ ದಿನವೇ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ಹೋಗಿರುತ್ತೇನೆ. ನಾನು ಆಸ್ಪತ್ರೆಗೆ ಹೋಗುವಷ್ಟರಲ್ಲಿ ನನ್ನ ಮಗ ತೀರಿಕೊಂಡಿದ್ದನು. ನಂತರ ಸಂಜುವನ್ನು ಅಪಘಾತದ ಬಗ್ಗೆ ಕೇಳಲಾಗಿ ಸದರಿ ಸಂಜುರವರು ತಿಳಿಸಿದ್ದೇನೆಂದರೆ ಊಟ ತರಲು ದ್ವಿಚಕ್ರ ವಾಹನದಲ್ಲಿ ಸಂಜು ಮತ್ತು ನನ್ನ ಮಗನು ಹೋಗಿದ್ದು ಆ ಸಂದರ್ಬದಲ್ಲಿ ಕಾರಿಗೂ ಮತ್ತು ದ್ವಿಚಕ್ರ ವಾಹನಕ್ಕೆ ಅಪಘಾತ ಆಗಿರುತ್ತದೆ ಎಂದು ತಿಳಿಸಿರುತ್ತಾರೆ. ನಂತರ ನಾನು ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ಸಾಕ್ಷಿಗೆ ಈಗ ದೂರನ್ನು ತೋರಿಸಿದ್ದು, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1 ಎಂದು, ಅದರಲ್ಲಿ ಇರುವ ಸಾಕ್ಷಿಯ ಹೆಬ್ಬೆಟ್ಟಿನ ಗುರುತನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ಅವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡುವಂತೆ ಕೋರಿಕೊಂಡಿದ್ದು, ಆಲಿಸಿ ಅನುಮತಿ ನೀಡಲಾಯಿತು)

<u>ಪಾಟಿ ಸವಾಲುಃ ಮಾನ್ಯ ಸ.ಸ.ಅ ರವರಿಂದ</u>

ಅಪಘಾತ ಆಗಿರುವ ವಿಚಾರವನ್ನು ಪುರುಷೋತ್ತಮ್ ರವರು ಕರೆ ಮಾಡಿ ನನಗೆ ತಿಳಿಸಿರುತ್ತಾರೆ ಎಂದರೆ ಸರಿ .

ನಾನು ಚಾಸಾ.2 ರವರನ್ನು ವಿಚಾರಿಸಿದಾಗ ಸಚಿನ್ ಗೆ ಸೇರಿದ ಮೋಟಾರ್ ಸೈಕಲ್ ಸಂಖ್ಯೆ ಕೆಎ 09 ಹೆಚ್ ಡಬ್ಲ್ಯೂ 4984 ನಲ್ಲಿ ರವಿಕಿರಣ್ ಮತ್ತು ಚಾಸಾ.2 ರವರು ಬೆಳಗೋಳದ ಹತ್ತಿರ ಊಟ ತರಲು ಹೋದಾಗ ಅಪಘಾತ ಆಗಿರುತ್ತದೆ ಎಂದು ತಿಳಿಸಿರುತ್ತಾರೆ ಎಂದರೆ ಸರಿ. ಮೈಸೂರಿನಿಂದ ಪಂಪ್ ಹೌಸ್ ಕಡೆಗೆ ಬರಬೆಕಾದರೆ ಕೆಎ 41 ಎಂ 5476 ಕಾರಿನಿಂದ ಅಪಘಾತ ಆಗಿರುತ್ತದ ಎಂದರೆ ಸರಿ. ಆರೋಪಿಯ ಅಜಾಗರೂಕತೆಯಿಂದ ವಾಹನ ಚಾಲನೆ ಮಾಡಿದ ಕಾರಣ ಈ ಅಪಘಾತ ಆಗಿರುತ್ತದೆ ಎಂದರೆ ಸರಿ. ನಾನು ಪೊಲೀಸರ ಮುಂದೆ ನನ್ನ ಮರು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

<u>ಪಾಟೀಸವಾಲು ಃ ಆರೋಪಿ ಪರ ವಕೀಲರಿಂದ</u>

ಆರೋಪಿ ಪರ ವಕೀಲರು ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು ಆಲಿಸಿ ಮುಂದೂಡಲಾಯಿತು.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.